ಶೀಘ್ರ ಕೊಬ್ಬರಿಗೆ ಬೆಂಬಲ ಬೆಲೆ: ಸಿಎಂ ಬೊಮ್ಮಾಯಿ

ತಿಪಟೂರು: ತಿಪಟೂರಿನಲ್ಲಿ ತೆಂಗು ಬೆಳೆಗಾರರು ಕೊಬ್ಬರಿ ನಂಬಿ ಜೀವನ ನಡೆಸುತ್ತಿದ್ದು, ಶೀಘ್ರದಲ್ಲೇ ಕೊಬ್ಬರಿ ನಫೆಡ್ ತೆರದು ಬೆಂಬಲ ಬೆಲೆ ಘೋಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು. ನಗರದ ಶ್ರೀ ಸಿದ್ದರಾಮೇಶ್ವರ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಭಾನುವಾರ ರಾಜ್ಯಮಟ್ಟದ ಗುರುಸಿದ್ದರಾಮೇಶ್ವರರ 850ನೇ ಸುವರ್ಣ ಜಯಂತಿ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿ, ಸದಾ ರೈತರಪರ ಚಿಂತನೆಯಲ್ಲಿರುವ ಸರ್ಕಾರ ರೈತರ ಕಷ್ಟಕ್ಕೆ ಸ್ಪಂದಿಸಲಿದೆ ಎಂದರು.

Karnataka Prabha
Pg.08

ರೈತರ ಜತೆ ಇಂದು ಎಚ್‌ಡಿಕೆ ಆನ್‌ಲೈನ್ ಸಂಕ್ರಾಂತಿ ಸಂವಾದ

ಪಂಚರತ್ನ ಯಾತ್ರೆ ಭಾಗವಾಗಿ ಕೃಷಿ ಸಮಸ್ಯೆ ಬಗ್ಗೆ ಚರ್ಚೆ

50 ವಿಧಾನಸಭಾ ಕ್ಷೇತ್ರ ವ್ಯಾಪ್ತಿ ರೈತರು ಚರ್ಚೆಲಿ ಭಾಗಿ

ಬೆಂಗಳೂರು: ಪಂಚರತ್ನ ಯಾತ್ರೆ ಮುಂದುವರೆದ ಭಾಗವಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಕೃಷಿ ಸಮಸ್ಯೆಗಳ ಬಗ್ಗೆ ರೈತರ ಜತೆ ಮುಕ್ತವಾಗಿ ಚರ್ಚಿಸಲು ರೈತ ಸಂಕ್ರಾಂತಿ ಎಂಬ ಆನ್‌ಲೈನ್ ಸಂವಾದವನ್ನು ಸೋಮವಾರ ಮಧ್ಯಾಹ್ನ 3ಕ್ಕೆ ಹಮ್ಮಿಕೊಂಡಿದ್ದಾರೆ. ಬಿಡದಿಯ ಸ್ವಂತ ತೋಟದಲ್ಲಿ ರೈತ ಸಂಕ್ರಾಂತಿ ಸಂವಾದ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 3.30ರಿಂದ ಸಂಜೆ 5 ಗಂಟೆವರೆಗೂ ರೈತರ ಜತೆ ಸಂವಾದ ನಡೆಸುತ್ತೇನೆ. ಸುಮಾರು 50ಕ್ಕೂ ಹೆಚ್ಚು ವಿಧಾನಸಭೆ ಕ್ಷೇತ್ರಗಳ ರೈತರು ಆನ್‌ಲೈನ್‌ನಲ್ಲಿ ಜತೆಯಾಗಲಿದ್ದಾರೆ. ಯಾವುದೇ ಭಾಗದ ರೈತರು ಈ ಸಂವಾದದಲ್ಲಿ ಭಾಗಿಯಾಗಬಹುದು ಹಾಗೂ ಸಮಸ್ಯೆಗಳು, ಪರಿಹಾರಗಳನ್ನು ತಿಳಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರೈತರು ಶಾಶ್ವತವಾಗಿ ಸಾಲಗಾರರಾಗದಂತೆ ಮಾಡುವುದು ಹಾಗೂ ಅವರಿಗೆ ಆರ್ಥಿಕ ಚೈತನ್ಯ ಕಲ್ಪಿಸುವ ಉದ್ದೇಶದಿಂದ ರೂಪಿಸಿರುವ ರೈತ ಚೈತನ್ಯ ಕಾರ್ಯಕ್ರಮದ ಬಗ್ಗೆ ಅನ್ನದಾತರಿಗೆ ಈ ಸಂವಾದದಲ್ಲಿ ಮನವರಿಕೆ ಮಾಡಿಕೊಡುತ್ತೇನೆ. ಕೃಷಿ ಸಮಸ್ಯೆಗಳ ಬಗ್ಗೆ ಇನ್ನಷ್ಟು ಪರಿಣಾಮಕಾರಿಯಾಗಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಾನು ರೈತರ ಜತೆ ಸಂವಾದ ನಡೆಸುತ್ತಿದ್ದೇನೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡರು ಸಂದೇಶ ನೀಡಲಿದ್ದು, ಚರ್ಚೆಯನ್ನು ಅವರೂ ಆಲಿಸಲಿದ್ದಾರೆ ಎಂದು ಹೇಳಿದ್ದಾರೆ.



Karnataka Prabha
Pg.07

Prajavani Pg.08

'ಬೆಂಬಲ ಬೆಲೆಯಲ್ಲಿ ವಾರದೊಳಗೆ ಕೊಬ್ಬರಿ ಖರೀದಿ'



ತುಮಕೂರು: ವಾರದೊಳಗೆ ನಾಫೆಡ್ ಮುಖಾಂತರ ಬೆಂಬಲ ಬೆಲೆಯಡಿ ಕೊಬ್ಬರಿಯನ್ನು ಖರೀದಿಸ ಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ತಿಳಿಸಿದರು.

ತಿಪಟೂರಿನಲ್ಲಿ ಸಿದ್ಧರಾಮೇ-ಶ್ವರ ಜಯಂತಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಪ್ರತಿ ಬಾರಿ ಕೊಬ್ಬರಿ ಖರೀದಿಗೆ ಆದ್ಯತೆ ನೀಡಲಾಗುತ್ತಿದೆ. ರಾಗಿ ಖರೀದಿಗೂ ಈಗಾಗಲೇ ರೈತರು ನೋಂದಣಿ ಮಾಡಿಕೊಂಡಿದ್ದು, ಮುಂದಿನ ವಾರದಲ್ಲಿ ಖರೀದಿ ಆರಂಭಿಸ ಲಾಗುವುದು ಎಂದು ಹೇಳಿದರು.

Vijayavani Pg.08

ಅಡಕೆ ಎಲೆಚುಕ್ಕೆ ರೋಗ ಅಧ್ಯಯನ ಪ್ರವಾಸ

ಬೆಂಗಳೂರು: ಅಡಕೆ ಬೆಳೆಗೆ ಎಲೆಚುಕ್ಕೆ ರೋಗದಿಂದಾಗಿ ತೊಂದರೆಗೆ ಒಳಗಾಗಿರುವ ಹಿನ್ನೆಲೆಯಲ್ಲಿ ಬೆಳಗಾರರ ಹಿತದೃಷ್ಟಿಯಿಂದ ಫಾರ್ಮ್ ಟಿವಿ, ಜ. 17ರಿಂದ 3 ದಿನಗಳ ಕಾಲ ಅಧ್ಯಯನ ಪ್ರವಾಸ ಕೈಗೊಂಡಿದೆ. ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಸಿಪಿಸಿಆರ್‌ಐ, ಸಿಸಿಆರ್‌ಐ, ಕೃಷಿ ಪ್ರಯೋಗ ಪರಿವಾರ ಮತ್ತು ಸ್ವತಂತ್ರ ಖ್ಯಾತ ಸಸ್ಯರೋಗ ತಜ್ಞರ ತಂಡ ರಚಿಸಿ, ಕಳಸ, ಆಗುಂಬೆ, ತೀರ್ಥಹಳ್ಳಿ ಮುಂತಾದ ರೋಗ ಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಲಾಗುವುದು. ಅಧ್ಯಯನದ ಫಲಶ್ರುತಿ ಆಧರಿಸಿ ಸಂಬಂಧಿಸಿದ ಸಂಸ್ಥೆ ಮತ್ತು ಕಂಪನಿಗಳ ಸಹಯೋಗದಲ್ಲಿ ಅಡಕೆ ಎಲೆಚುಕ್ಕೆ ರೋಗಕ್ಕೆ ಮಾರ್ಗೋಪಾಯ ರೂಪಿಸಲಾಗುವುದು ಎಂದು ಫಾರ್ಮ್ ಟಿವಿ ಸಂಪಾದಕ ಡಾ.ವೆಂಟ್ರಮಣ ಹೆಗಡೆ ತಿಳಿಸಿದ್ದಾರೆ. ಇದು ವೈಜ್ಞಾನಿಕ ಪ್ರವಾಸವಾಗಿದ್ದು, ರೈತರು ರೋಗ ಹಾಗೂ ರೋಗನಿಯಂತ್ರಣದ ಬಗ್ಗೆ ಮಾಹಿತಿ, ಸಲಹೆ ಹಂಚಿಕೊಳ್ಳಬಹುದು. ಆಸಕ್ತರು 9008709347 ಮತ್ತು 9980534320 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.



Agriculture to get a lift as state farmers take to drones

25% of India's drone startups located in Karnataka

VARSHA GOWDA
BENGALURU, DHNS

From nutrients to pesticides and crop surveys, drones are set to change the landscape of agriculture in the state. With an estimated 50 Unmanned Aerial Vehicle (UAV) companies operating in the farming sector, Karnataka is on the brink of a technological revolution. Over 25% of India's drone startups are located in the state.

The emerging technology has been embraced by farmers across the state. Ganesh Katte, an arecanut farmer from Shivamogga, for instance, hired a drone company to spray pesticides. "I was informed about targeted spraying to control arecanut leaf spot disease," he says. To spray his 10-acre farm, Katte spent Rs 26,000.

Shivakumar H G, who heads a drone company, quantifies just how fast the demand for such services has increased in Karnataka. "In 2021, we sprayed about 2,600 acres of land with pesticides. After word spread, demand quadrupled in 2022 and we ended up spraying close to 10,500 acres of land," he says.

As drones are highly customisable, they can be used in spraying nutrients and pesticides for both field and horticulture crops, explains Dr Anand B A, assistant professor at the Department of Farm Machineries and Power Engineering at Gandhi Krishi Vigyana Kendra, Bengaluru.

"Currently agricultural universities in the state have been authorised to determine the concentration of pesticides to be used for different crops," says Dr Anand. In the past four months, drone trials have been under way for ragi, paddy, tur dal, plantation and horticulture crops in various agricultural institutes in Karnataka.

An official from the department of agriculture explains that regulating drones in agriculture is particularly important as the dispersal of pesticides in different wind speeds and climatic conditions needs to be studied.

▸Drones, Page 4

How they help

Drones can be used to spray nutrients, pesticides

- Use of drones reduces human exposure to harsh chemicals
- They drastically reduce the time spent on crop surveys and help to monitor plant health
- Moisture levels and soil health can also be monitored through UAVs

The technology could be used to assess the extent of crop damage to help determine compensation

Challenges

- Risks of aerial spraying of agrochemicals yet to be assessed
- Since landholdings are small, pesticide drift is possible



Deccan Herald Pg.05

ಹೈನುಗಾರರ ಬದುಕು ಸೂರೆ!

ಕಾರಂತ ಲೇಔಟ್ ವ್ಯಾಪ್ತಿಯ ಒಂದು ಸಾವಿರ ಕುಟುಂಬಗಳಿಗೆ ಸಂಕಷ್ಟ

■ ಆರ್. ತುಳಸಿಕುಮಾರ್ ಬೆಂಗಳೂರು

ರಾಜ್ಯ ಸರ್ಕಾರ ಕೆಎಂಎಫ್ ಮೂಲಕ ಹೈನೋದ್ಯಮವನ್ನು ಎತ್ತರಕ್ಕೇರಿಸುವ ಜತೆಗೆ ಗೋಸಂತತಿ ವೃದ್ಧಿಗೂ ವಿಶೇಷ ಮುತುವರ್ಜಿ ವಹಿಸಿದೆ. ಆದರೆ, ಹೈನುಗಾರಿಕೆಯನ್ನೇ ನಂಬಿ ಜೀವನ ನಡೆಸುತ್ತಿರುವ ಸಾವಿರಕ್ಕೂ ಹೆಚ್ಚು ಕೃಷಿಕ ಕುಟುಂಬಗಳನ್ನು ಬೀದಿಪಾಲು ಮಾಡಲಿರುವ ಶಿವರಾಮ ಕಾರಂತ ಲೇಔಟ್ ನಿರ್ಮಾಣದ ಹೊಣೆ ಹೊತ್ತಿರುವ ಬಿಡಿಎ, ರೈತರಿಗೆ ಪರ್ಯಾಯ ಉದ್ಯೋಗ ಕಲ್ಪಿಸಲು ಬೆನ್ನು ತಿರುಗಿಸಿದೆ.

ಒಂದೆಡೆ ಫಲವತ್ತಾದ ಭೂಮಿಯನ್ನು ಕಳೆದುಕೊಂಡು ಬಿಡಿಗಾಸು ಪರಿಹಾರಕ್ಕೆ ವರ್ಷಗಳ ಕಾಲ ಕಾಯುವ ಶಿಕ್ಷೆಗೆ ಒಳಗಾಗಲಿರುವ ರೈತರು, ಹೈನುಗಾರಿಕೆಯಿಂದ ಜೀವನ ರೂಪಿಸಿಕೊಂಡಿದ್ದನ್ನೂ ಕಳೆದುಕೊಳ್ಳುವ ಹಂತದಲ್ಲಿದ್ದಾರೆ. ಕೃಷಿಯಿಂದ ಕೈಸುಟ್ಟುಕೊಂಡಿದ್ದ ನಮಗೆ ಹಸು ಸಾಕಣೆ ಜೀವನಾಧಾರವಾಗಿತ್ತು. ಈಗ ಆ ಏಕೈಕ ಆಸರೆಯನ್ನೂ ಕಸಿದುಕೊಳ್ಳಲಾಗುತ್ತಿದೆ. ಉಳ್ಳವರು ಮನೆ ನಿರ್ಮಿಸಿಕೊಳ್ಳಲು ನಮ್ಮ ಜಮೀನಿನ ಜತೆಗೆ ಬದುಕನ್ನು ಕಸಿದರೆ ಹೇಗೆ ಎಂಬ ಪ್ರಶ್ನೆಯನ್ನು ಕಾರಂತ ಬಡಾವಣೆ ವ್ಯಾಪ್ತಿಯ ಹೈನುಗಾರರು ಸರ್ಕಾರದ ಮುಂದಿಟ್ಟಿದ್ದಾರೆ.



ಸಂಗ್ರಹ ಚಿತ್ರ

ಲೇಔಟ್ ಸಂಕಷ್ಟ ಭಾಗ-2

» ಸ್ವಾವಲಂಬಿ ಜೀವನ ರೂಪಿಸಿಕೊಂಡಿದ್ದವರು ಬೀದಿಗೆ



ರೈತರ ಕೈಹಿಡಿದಿರುವ ಹೈನುಗಾರಿಕೆ: ಕಾರಂತ ಬಡಾವಣೆ ರಚನೆಗಾಗಿ ಭೂಸ್ವಾಧೀನವಾಗಿರುವ 17 ಹಳ್ಳಿಗಳಲ್ಲಿ ಬಹುತೇಕ ರೈತರು ಹೈನುಗಾರಿಕೆಯನ್ನೇ ನೆಚ್ಚಿಕೊಂಡಿದ್ದಾರೆ. ಕೃಷಿ ಜಮೀನಿನಿಂದ ಆದಾಯ ಕುಂಠಿತವಾದಾಗ ಪರ್ಯಾಯ ಕಸುಬಾಗಿ ಹಸು ಸಾಕಣೆ ಮಾಡಲು ಸರ್ಕಾರ ಸೂಚಿಸಿತ್ತು. ಬೆಂಗಳೂರು ಕೃಷಿ ವಿವಿ ಕೂಡ ಸಮಗ್ರ ಕೃಷಿ ಪದ್ಧತಿಯಲ್ಲಿ ಹೂನುಗಾರಿಕೆ, ಕೋಳಿ ಸಾಕಣೆ ಮಾಡುವಂತೆ ರೈತರನ್ನು ಪ್ರೇರೇಪಿಸಿತ್ತು. ಇದರಿಂದಾಗಿ ಇಲ್ಲಿನ 14 ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸೊಸೈಟಿಗಳು ಕಾರ್ಯಾಚರಿಸುತ್ತಿದ್ದು, ಎಲ್ಲವೂ ಲಾಭದಲ್ಲೇ ನಡೆಯುತ್ತಿವೆ.

ಪ್ರಸ್ತುತ ಸಾವಿರಕ್ಕೂ ಹೆಚ್ಚು ರೈತ ಕುಟುಂಬಗಳು ಹಸು ಸಾಕಣೆಯಿಂದ ಆದಾಯದ ಹಳಿಗೆ ಬಂದಿವೆ. ಇದರಲ್ಲಿ ಮಹಿಳೆಯರ ಶ್ರಮ ಸಾಕಷ್ಟಿದೆ. ಯುವಜನತೆ ಕೂಡ ಹೈನುಗಾರಿಕೆಯಲ್ಲೇ ಸ್ವಯಂಉದ್ಯೋಗ ಕಂಡುಕೊಂಡಿದ್ದಾರೆ. ಇಲ್ಲಿನವರ ಮನೆಯ ಮಕ್ಕಳ ವಿದ್ಯಾಭ್ಯಾಸಕ್ಕೂ ಡೇರಿ ದುಡ್ಡನ್ನೇ ಖರ್ಚು ಮಾಡಲಾಗುತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ನಮ್ಮ ಬದುಕಿಗೆ ಪರ್ಯಾಯ ಕಲ್ಪಿಸದೆ ಒಕ್ಕಲೆಬ್ಬಿಸುವುದು ಯಾವ ನ್ಯಾಯ ಎಂದು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಸುರೇಶ್‌ಕುಮಾರ್, ಬಿಡಿಎ ವಿರುದ್ಧ ಕಿಡಿಕಾರಿದ್ದಾರೆ.

ಸರ್ಕಾರದ ನೆರವಿಲ್ಲದೆ ಕೃಷಿ ಕಾಯಕ

ಬೆಂಗಳೂರು ಹೆಚ್ಚು ನಗರೀಕರಣಕ್ಕೆ ಒಳಗಾಗಿರುವ ಕಾರಣ ಸರ್ಕಾರವು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಯನ್ನು ಪ್ರೋತ್ಸಾಹಿಸುತ್ತಿಲ್ಲ. ಇದರಿಂದ ದೊಡ್ಡ ಪ್ರಮಾಣದಲ್ಲಿ ಕೃಷಿಯೇತರ ಉದ್ದೇಶಕ್ಕೆ ಬಳಸಿಕೊಳ್ಳಲು ದಾರಿ ಮಾಡಿಕೊಟ್ಟಿದೆ. ಇದರ ಹೊರತಾಗಿಯೂ ಬೆಂಗಳೂರು ಉತ್ತರ ತಾಲೂಕಿಗೆ ಒಳಪಟ್ಟಿರುವ ಕಾರಂತ ಬಡಾವಣೆ ವ್ಯಾಪ್ತಿಯ ಹಳ್ಳಿಗರು ಸರ್ಕಾರದ ನೆರವಿಲ್ಲದೆ ಕೃಷಿಯಲ್ಲಿ ತೊಡಗಿದ್ದಾರೆ. ಬಹುತೇಕರು ಅರ್ಧ ಎಕರೆ, ಒಂದು ಎಕರೆ ಜಮೀನಿನಲ್ಲೇ ವ್ಯವಸಾಯ ಮಾಡುತ್ತಿದ್ದಾರೆ. ವಿವಿಧ ತರಕಾರಿ, ಹೂ- ಹಣ್ಣುಗಳನ್ನು ಬೆಳೆಯುವ ಜತೆಗೆ ಮನೆಯಲ್ಲೇ ಹಸು, ಕೋಳಿ ಸಾಕಣೆಯಲ್ಲಿ ತೊಡಗಿದ್ದಾರೆ. ಕಾಂಕ್ರೀಟ್ ಕಾಡು ಬೆಳೆಸಲು ಲೇಔಟ್ ನಿರ್ಮಿಸದೆ ಬದಲಿ ಮಾರ್ಗ ಕಂಡುಕೊಳ್ಳಲು ಸರ್ಕಾರ ಗಮನಹರಿಸಬೇಕು ಎನ್ನುತ್ತಾರೆ ರೈತರು.

ನಮ್ಮ ತಾತನ ಕಾಲದಿಂದಲೂ ಕೃಷಿಯನ್ನೇ ನಂಬಿದ್ದೇವೆ. ಆದಾಯ ಕುಂಠಿತವಾದಾಗ ಹೈನುಗಾರಿಕೆ ಕೈಹಿಡಿದ ಕಾರಣ ಮನೆಯವರೆಲ್ಲರೂ ಹಸು ಸಾಕಣೆಯಲ್ಲಿ ತೊಡಗಿದ್ದೇವೆ. ಈಗ ಬಿಡಿಎ ಭೂಮಿ ಕಿತ್ತುಕೊಂಡು ನಮ್ಮ ಉದ್ಯೋಗ ಕಸಿದಿದೆ. ಬೇರೆ ವೃತ್ತಿ ತಿಳಿಯದ ನಮಗೀಗ ಪರ್ಯಾಯ ಉದ್ಯೋಗ ನೀಡುವವರು ಯಾರು?

| ಎಂ. ಶ್ರೀಧರ್ ರಾಮಗೊಂಡನಹಳ್ಳಿ ರೈತ

ಬೆಂಗಳೂರು ನಗರದ ವಿಸ್ತರಣೆಯಲ್ಲಿ ರೈತರ ತ್ಯಾಗ ಅತ್ಯಮೂಲ್ಯವಾದುದು.



ಕಾರಂತ ಬಡಾವಣೆಗೆ ಭೂಮಿ ನೀಡಿರುವ ರೈತರ ಹಿತ ಕಾಪಾಡುವಲ್ಲಿ ಬಿಡಿಎ ಬದ್ಧವಾಗಿದೆ. ಯಾರಿಗೂ ಕಷ್ಟವಾಗದ ರೀತಿಯಲ್ಲಿ ನಾವು ಬಡಾವಣೆಯನ್ನು ಅಭಿವೃದ್ಧಿಪಡಿಸಲಿದ್ದೇವೆ.

| ಜೆ. ಕುಮಾರನಾಯಕ್ ಬಿಡಿಎ ಆಯುಕ್ತ
(ಡಿ.15ರಂದು ನಡೆದ ಕಾರಂತ ಲೇಔಟ್ ಭೂಮಿಪೂಜೆ ವೇಳೆ ನೀಡಿದ್ದ ಹೇಳಿಕೆ)

ಪರ್ಯಾಯ ಉದ್ಯೋಗಕ್ಕೆ ಪಟ್ಟು

ಕೇಂದ್ರ ಸರ್ಕಾರ ರೂಪಿಸಿರುವ 2013ರ ಭೂ ಪರಿಹಾರ ಕಾಯ್ದೆ ಆಡಿಯಲ್ಲಿ ಪುನರ್ವಸತಿ ಹಾಗೂ ಮರುನಿರ್ಮಾಣ (ಎಲ್‌ಎಆರ್ ಆರ್) ಅಂಶಗಳಿವೆ. ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ವೇಳೆ ಈ ಅಂಶವನ್ನು ಪರಿಗಣಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿದೆ. ಹೀಗಿದ್ದರೂ ಬಿಡಿಎ ವೈಜ್ಞಾನಿಕ ಪರಿಹಾರ ಸೂತ್ರವನ್ನು ಒಪ್ಪದೆ ಏಕಪಕ್ಷೀಯವಾಗಿ ಹಳೆಯ ಕಾನೂನಿನಡಿ ಸೈಟ್‌ಗಳನ್ನು ಮಾತ್ರ ನೀಡಲಿದೆ. ಇದರಿಂದ ನಮ್ಮ ಬದುಕಿಗೆ ಆಧಾರವಾಗಿರುವ ಹೈನುಗಾರಿಕೆಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ರೈತರು ಆಗ್ರಹಿಸಿದ್ದಾರೆ.